**ದಿನಾಂಕ: 12–01–2012 ರಂದು ಬೆಳಿಗ್ಗೆ 11.00 ಘಂಟೆಗೆ ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು | | | ಹಾಜರಿದ್ದ ಅಧಿಕಾರಿಗಳು | |
|---|---|---|---|---|
| ಶ್ರೀಯುತರಾದ :– | | | | |
| 1 | ರ.ಆಂಜನಪ್ಪ | ಅಧ್ಯಕ್ಷರು | 1 | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 2 | ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | 2 | ಮುಖ್ಯ ಅಭಿಯಂತರರು(ಪಶ್ಚಿಮ) |
| 3 | ಬಿ.ಆರ್.ಚಂದ್ರಶೇಖರ್ | ಸದಸ್ಯರು | 3 | ಮುಖ್ಯ ಲೆಕ್ಕಾಧಿಕಾರಿ |
| 4 | **ಹೆಚ್.ಎನ್.ಗಂಗಾಧರ್** | ಸದಸ್ಯರು | 4 | ಉಪ ನಿಯಂತ್ರಕರು(ಹಣಕಾಸು) |
| 5 | ಎನ್.ಶಕುಂತಲ | ಸದಸ್ಯರು | 5 | ಕಾರ್ಯಪಾಲಕ ಅಭಿಯಂತರರು(ಯೋಜನೆ– ಪೂರ್ವ/ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ವಲಯ |
| 6 | ಎಂ.ಶಿವರಾಜ್ | ಸದಸ್ಯರು | | |
| 7 | ಆರ್.ಎಸ್.ಸತ್ಯನಾರಾಯಣ್ | ಸದಸ್ಯರು | | |
| 8 | ಕೆ.ದೊಡ್ಡಣ್ಣ | ಸದಸ್ಯರು | 6 | ತೋಟಗಾರಿಕೆ ಅಧೀಕ್ಷಕರು(ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾ.ರಾ.ನಗರ)ವಲಯ |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಮಾನ್ಯ ಆಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿ ಮಾತನಾಡುತ್ತಾ, ಸಮಿತಿಗೆ ಹೊಸದಾಗಿ ಆಯ್ಕೆಯಾದ ಸದಸ್ಯರುಗಳು, ಶ್ರೀ.ಎಂ.ಶಿವರಾಜ್ ಮತ್ತು ಶ್ರೀ.ಕೆ.ದೊಡ್ಡಣ್ಣರವರನ್ನು ಸಭೆಗೆ ಪರಿಚಯಿಸಿದರು.

ಮುಂದುವರೆದಂತೆ, ಅಧ್ಯಕ್ಷರು ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಸಮಿತಿಯು ಪ್ರಾರಂಭವಾದ ದಿನದಿಂದಲೂ ಸಹ ಸಮಿತಿಯು ಕೇಳುವ ವಿವರಗಳಿಗೆ ಮಾಹಿತಿಯನ್ನು ಒದಗಿಸಲು ಅಸಮರ್ಥರಾಗುತ್ತಿದ್ದು, ಪದೇ ಪದೇ ಈ ಕುರಿತು ತಮಗೆ ಎಚ್ಚರಿಕೆ ನೀಡುತ್ತಿದ್ದರೂ ಸಹ ವಿವರಗಳಿಗೆ ಮಾಹಿತಿಯನ್ನು ಒದಗಿಸಲು ನಿರ್ಲಕ್ಷ್ಯತೆ ತೋರುತ್ತಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾ, ಇದನ್ನು ಗಂಭೀರವಾಗಿ ಪರಿಗಣಿಸಿ, ಅಂತಿಮವಾಗಿ ಇನ್ನೊಂದು ಬಾರಿ ಎಚ್ಚರಿಸುತ್ತಾ, ಮುಂದಿನ ದಿನಗಳಲ್ಲಿ ಸಮಿತಿಯು ಕೋರುವ ವಿವರಗಳಿಗೆ ಮಾಹಿತಿಯನ್ನು ಒದಗಿಸಲು ಅಧಿಕಾರಿಗಳು ನಿರ್ಲಕ್ಷತೆ ತೋರಿಸಿದಲ್ಲಿ, ಈ ಕುರಿತು ಮಾನ್ಯ ಆಯುಕ್ತರು ನಡೆಸುವ ಪೂರ್ವಭಾವಿ ಸಭೆಗಳಲ್ಲಿ ಪ್ರಸ್ತಾಪ ಮಾಡಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಶಿಫಾರಸ್ಸು ಮಾಡಲಾಗುವುದೆಂದು ಹಾಗೂ ಸಮಿತಿಗೆ ಮಾಹಿತಿ ನೀಡಲು ವಿಫಲರಾದ ಅಧಿಕಾರಿಗಳು ಸಭೆಗೆ ಹಾಜರಾಗಬಾರದೆಂದು ತಾಕೀಖು ಮಾಡಿದರು.

ಸಭೆ ನಡೆಯುವ ಮೂರು ದಿನಗಳ ಮುಂಚಿತವಾಗಿ ಮಾಹಿತಿಗಳನ್ನು ನೀಡಿದ್ದರೆ, ಮಾಹಿತಿಗಳನ್ನು ಅವಲೋಕಿಸಿ, ಸಭೆಯಲ್ಲಿ ವಿಷಯಗಳನ್ನು ಚರ್ಚಿಸಿ, ತೀರ್ಮಾನಗಳನ್ನು ತೆಗೆದುಕೊಳ್ಳಲು ಹಾಗೂ ಸಮಿತಿಯಿಂದ ತಪಾಸಣೆ ಕಾರ್ಯ ಹಮ್ಮಿಕೊಳ್ಳಲು ಅನುಕೂಲವಾಗುತ್ತದೆಂದು, ಸಭೆಯ ದಿನದಂದೇ ಮಾಹಿತಿಗಳನ್ನು ಒದಗಿಸಿದಲ್ಲಿ ವಿವರಗಳನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲು ಕಷ್ಟಕರವಾಗುವುದರಿಂದ ನಿಗಧಿತ ಸಮಯಕ್ಕೆ ಸರಿಯಾಗಿ ಸಮಿತಿಯು ಕೋರುವ ಕಡತಗಳನ್ನು ಹಾಗೂ ವಿವರಗಳಿಗೆ ಮಾಹಿತಿಯನ್ನು ನೀಡುವಂತೆ ಸೂಚಿಸಿದರು.

**ಮುಂದುವರೆದಿದೆ. . . . . .**

ಯಲಹಂಕ ವ್ಯಾಪ್ತಿಯಲ್ಲಿ ಬರುವ ಆಳ್ಳಾಲಸಂದ್ರ ಕೆರೆಯ ಅಭಿವೃದ್ಧಿ ಕಾಮಗಾರಿಗಳ ಅವಶ್ಯಕತೆ ಇರುವ ಬಗ್ಗೆ ಸಮಿತಿಯ ಗಮನಕ್ಕೆ ತರದೆ, ಅಧಿಕಾರ ಪ್ರತ್ಯಾಯೋಜನೆಯನ್ನು ಉಲ್ಲಂಘನೆ ಮಾಡಿ ನಾಲ್ಕು ಕಾಮಗಾರಿಯನ್ನು ನಿರ್ವಹಿಸುತ್ತಿದ್ದು, ಕಾಮಗಾರಿಗಳ ತಪಾಸಣೆ ಹಮ್ಮಿಕೊಳ್ಳಬೇಕಾಗಿರುವ ಪ್ರಯುಕ್ತ, ಅವುಗಳಿಗೆ ಸಂಬಂಧಪಟ್ಟಂತಹ ಮೂಲ ಕಡತಗಳನ್ನು ಸಮಿತಿಯ ಪರಿಶೀಲನೆಗೆ ಒದಗಿಸಲು ಸೂಚಿಸಿದ್ದರೂ ಸಹ ಮಾಹಿತಿಯನ್ನು ಒದಗಿಸದಿರುವ ಕಾರಣವನ್ನು ಸ್ಪಷ್ಟಪಡಿಸಲು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗೆ ಸೂಚಿಸಿದರು. (ಸಮಿತಿಯು ಕೇಳುವ ವಿವರಗಳಿಗೆ ಸಕಾಲದಲ್ಲಿ ಮಾಹಿತಿಯನ್ನು ಒದಗಿಸುವಂತೆ ಮಾನ್ಯ ಆಯುಕ್ತರ ಆದೇಶವಿದ್ದರೂ ಸಹ ಸಮಿತಿಗೆ ಮಾಹಿತಿ ಒದಗಿಸಲು ನಿರ್ಲಕ್ಷತೆ ತೋರುತ್ತಿರುವುದು ಕಂಡು ಬರುತ್ತದೆ.)

**ಶ್ರೀ.ಮಹಮದ್ ಜಾಖೀರ್, ಸ.ಕಾ.ನಿ.ಅ.(ಯೋಜನೆ – ಯಲಹಂಕ):** ಸಮಿತಿಯು ಕೋರಿರುವ ಈ ಕೆಳಕಂಡ ಕಡತಗಳನ್ನು ದಿನಾಂಕ:16–11–2011 ರಂದು ಜೆ.ಸಿ.ರಸ್ತೆಯಲ್ಲಿರುವ ವಿಚಾರಣಾಧಿಕಾರಿಯವರ ಕಛೇರಿಗೆ ತಪಾಸಣೆಗಾಗಿ ಕಳುಹಿಸಲಾಗಿದ್ದು, ಅಲ್ಲಿಂದ ಬಂದ ನಂತರ, ಕೋರಿರುವ ಕಡತಗಳನ್ನು ಸಮಿತಿಯು ಪರಿಶೀಲನೆಗೆ ಒದಗಿಸಲಾಗುವುದೆಂದು ತಿಳಿಸಿದರು.

| Sl. No | Name of the Work | Work Code No. | Estimate Cost |
|---|---|---|---|
| 1. | Construction of Immersion tank at Allasandra kere | 000-10-N-P-P-O-CD-005 | 60.00 |
| 2. | Construction Compound wall and Grill to Allalasandra Kere all round | 000-10-N-P-P-O-CD-006 | 192.00 |
| 3. | Providing chain link fencing and Gates around protected area. | 202-09-N-J-P-O-FE-002 | 54.00 |
| 4. | Construction of toilet block, Boating Jetty & Shelters with Modern amenities at Allasandra Kere for Public. | 000-10-N-P-P-O-CD-008 | 50.00 |
| 5. | Construction of pitching around Allalasandra Kere. | 000-10-N-P-P-O-CD-009 | 150.00 |
| 6. | Construction of pipe culverts for waste weir at Allalasandra Kere | 000-10-N-P-P-O-CD-010 | 98.00 |
| 7. | Construction of Jogging track around Allalasandra Kere | 000-10-N-P-P-O-CD-011 | 198.00 |
| 8. | Construction of Dwarf wall around children play Equipments/Amphi Theater a Yelahanka new town | 000-10-N-P-P-O-CD-013 | 52.00 |
| 9. | Providing Chain Link Fencing for Allalasandra Lake (Byatarayana Pura Zone) | 202-09-N-J-P-O-FE-002 | 42.47 |
| 10. | Providing Electrical Lighting and Other Accessories at Allalasandra Kere Area. | 002-10-N-G-T-S-LG-008 | 99.50 |
| 11. | Providing Electrical Fixtures and Other Accessories at Sewage Treatment Plant and Children Play area at Allalasandra Kere Area. | 002-10-N-G-T-S-LG-009 | 92.50 |
| 12. | Providing Street Light and Ornamental lights to Allalasandra Tank and connecting to Doddaballapura road and adjoining areas. | 002-10-N-G-T-S-LG-015 | 140.00 |

**ಅಧ್ಯಕ್ಷರು** : ಆಳ್ಳಾಲಸಂದ್ರ ಕೆರೆಗೆ ಸಂಬಂಧಪಟ್ಟ ಕಡತಗಳನ್ನು ಸಮಿತಿಯ ಪರಿಶೀಲನೆಗೆ ಒದಗಿಸಲು ಕೋರಿ ದಿನಾಂಕ:09–11–2012 ರಂದು ಪತ್ರ ಮುಖೇನ ಹಾಗೂ ಸಮಿತಿಯಲ್ಲಿ ನಡೆದ ನಾಲ್ಕು ಸಭೆಗಳಲ್ಲಿ ತಿಳಿಸುತ್ತಿದ್ದರೂ ಸಹ ಇದುವರೆವಿಗೂ ಕಡತವನ್ನು ಒದಗಿಸಿರುವುದಿಲ್ಲ. ಆದರೆ, ವಿಚಾರಣಾಧಿಕಾರಿಗಳು ಕೇಳಿದ ತಕ್ಷಣ ಕಡತಗಳನ್ನು ಒದಗಿಸಿರುವುದು ಎಷ್ಟು ಸಮಂಜಸವೆಂದು ಪ್ರಶ್ನಿಸುತ್ತಾ, ಸಮಿತಿಯ ಆದೇಶಗಳಿಗೆ ಮಾನ್ಯತೆ ಇಲ್ಲವೆಂದ ಮೇಲೆ ಸಮಿತಿ ಅಸ್ಥಿತ್ವ ಏಕೆ ಬೇಕೆಂದು ವಿಶಾದ ವ್ಯಕ್ತಪಡಿಸಿದರು ಹಾಗೂ ಅಧಿಕಾರಿಗಳು ಸಮಿತಿಯ ಆದೇಶ ಮತ್ತು ನಿರ್ಣಯಗಳಿಗೆ ಗೌರವವನ್ನು ಸೂಚಿಸುವುದನ್ನು ರೂಡಿಸಿಕೊಳ್ಳುವಂತೆ ಸೂಚಿಸುತ್ತಾ,

ಮಾನ್ಯ ಆಯುಕ್ತರು ದಿನಾಂಕ:09–12–2012 ರಂದು ಹೊರಡಿಸಿರುವ ಸುತ್ತೋಲೆಯ ಆದೇಶದಲ್ಲಿ ಎಲ್ಲಾ ವಲಯ ವ್ಯಾಪ್ತಿಯ ತೋಟಗಾರಿಕೆ ಕಾರ್ಯಕ್ರಮಗಳು 2011–12ನೇ ಸಾಲಿನಲ್ಲಿ ಹಂಚಿಕೆ ಮಾಡಲಾದ ಅನುದಾನಕ್ಕೆ ಅನುಗುಣವಾಗಿ ವಲಯವಾರು ವಾರ್ಡ್‌ವಾರು ಕ್ರಿಯಾ ಯೋಜನೆ ಪಟ್ಟಿಯನ್ನು ತಯಾರಿಸಿ ಕಳುಹಿಸುವುದರ ಬಗ್ಗೆ ತಿಳಿಸಿದ್ದು, ಆಯುಕ್ತರ ಸುತ್ತೋಲೆ ಆದೇಶದಂತೆ, 2011–12ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಿರುವ ಅನುದಾನಕ್ಕೆ ಅನುಗುಣವಾಗಿ, ಕಾರ್ಯಕ್ರಮ ಪಟ್ಟಿ (ಪಿ.ಓ.ಡಬ್ಲ್ಯೂ.) ಯನ್ನು ತಯಾರಿಸಿ, ಸಮಿತಿಯ ಅನುಮೋದನೆ ಪಡೆದು ಕಾಮಗಾರಿಗಳನ್ನು ಅಪರ/ ಜಂಟಿ ನಿರ್ದೇಶಕರು ತೋಟಗಾರಿಕೆ / ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಮೂಲಕ ವಿಶೇಷ ಅಯುಕ್ತರು (ಯೋಜನೆ) ಮತ್ತು ಆಯುಕ್ತರರವರಿಗೆ ಸಲ್ಲಿಸುವುದು. ಆಯುಕ್ತರ ಅನುಮೋದನೆಯೊಂದಿಗೆ ತೋಟಗಾರಿಕೆ ಸ್ಥಾಯಿ ಸಮಿತಿಗೆ ಮಂಡಿಸಿ ಅನುಮೋದನೆ ಪಡೆದು ಕಾಮಗಾರಿ ಸಂಖ್ಯೆ ನೀಡುವ ಬಗ್ಗೆ, ಆಯುಕ್ತರ ಆದೇಶದಲ್ಲಿನ ಸೂಚನೆ/ ಮಾರ್ಗಸೂಚಿಗಳನ್ನು ಪಾಲಿಸಲು ಸೂಚಿಸಿದರು. ಈ ಸಂಬಂಧ ಚರ್ಚಿಸುವ ಸಲುವಾಗಿ, ಸಭೆಗೆ ಎಲ್ಲಾ ವಲಯದ ಮುಖ್ಯ ಅಭಿಯಂತರರನ್ನು ಆಹ್ವಾನಿಸಿದ್ದರೂ ಸಹ, ಪಶ್ಚಿಮ ವಲಯಕ್ಕೆ ಸಂಬಂಧಪಟ್ಟ ಮುಖ್ಯ ಅಭಿಯಂತರರೊಬ್ಬರೇ ಸಭೆಗೆ ಹಾಜರಾಗಿದ್ದು, ಪಶ್ಚಿಮ ವಲಯವನ್ನು ಹೊರತುಪಡಿಸಿ, ಉಳಿಕೆ ವಲಯದ ಯಾರೊಬ್ಬ ಮುಖ್ಯ ಅಭಿಯಂತರರು ಸಭೆಗ ಹಾಜರಾಗದೇ ಇರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು

ಎಲ್ಲಾ ವಿಭಾಗಗಳ ಕಾರ್ಯಪಾಲಕ ಅಭಿಯಂತರರು ತಮ್ಮ ವಿಭಾಗಗಳಲ್ಲಿ ನಿರ್ವಹಿಸುವ ಎಲ್ಲಾ ರೀತಿಯ ಕಾಮಗಾರಿಗಳಿಗೆ ಕಾಮಗಾರಿ ಬಿಲ್ ನೊಂದಣಿಯ ಸಾಮಾನ್ಯ ಜೇಷ್ಠತೆಯನ್ನು ಕಡ್ಡಾಯವಾಗಿ ಪಾಲಿಸುವುದು ಮತ್ತು ಜೇಷ್ಠತೆಯ ಆಧಾರದ ಮೇಲೆ ಹಣ ಭರವಸೆಗೆ ವಲಯ ಮುಖ್ಯ ಅಭಿಯಂತರರು, ವಲಯ ಅಪರ/ಜಂಟಿ ಮೂಲಕ ಜೇಷ್ಟತೆ ದೃಢೀಕರಣದೊಂದಿಗೆ ವಿಶೇಷ ಆಯುಕ್ತರು (ಯೋಜನೆ & ಹಣಕಾಸು) ಮತ್ತು ಆಯುಕ್ತರ ಅನುಮೋದನೆ ಪಡೆಯುವುದು ಕಡ್ಡಾಯವಾಗಿದೆಯೆಂದು ಸೂಚಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ, ಅಭಿವೃದ್ಧಿಗೊಂಡಿರುವ ಉದ್ಯಾನವನಗಳನ್ನು ಮತ್ತೇ ಮತ್ತೇ, ಅಭಿವೃದ್ದಿಪಡಿಸುವುದರ ಬದಲಿಗೆ, ಅಭಿವೃದ್ಧಿಗೊಳ್ಳದಿರುವ ಉದ್ಯಾನವನಗಳ ಕಡೆ ಹೆಚ್ಚಿನ ಗಮನಹರಿಸಿ, ಅವುಗಳಿಗೆ ಮೊದಲ ಅಧ್ಯತೆ ನೀಡಬೇಕೆಂದು ಸೂಚಿಸುತ್ತಾ, ಫ್ರೀಡಂ ಪಾರ್ಕ್ ನಗರದ ಕೇಂದ್ರ

ಭಾಗದಲ್ಲಿರುವುದರಿಂದ ಹಾಗೂ ಸ್ವಾತಂತ್ರ ಉದ್ಯಾನವನದಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಸಭೆ ಸಮಾರಂಭ, ಧರಣಿ, ಸತ್ಯಾಗ್ರಹಗಳನ್ನು ನಡೆಸುತ್ತಿದ್ದು, ಇಲ್ಲಿಗೆ ನೂರಾರು ಜನ ಆಗಮಿಸುವುದರಿಂದ ಈ ಉದ್ಯಾನವನವನ್ನು ಇನ್ನು ಹೆಚ್ಚು ಅಕರ್ಷಣೀಯವಾಗಿಸುವ ಸಲುವಾಗಿ, ಉತ್ತಮ ಜಾತಿಯ ವೃಕ್ಷಗಳನ್ನು ನೆಟ್ಟು, ಈ ಪ್ರದೇಶವನ್ನು ವೃಕ್ಷವನನ್ನಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

2011–12ನೇ ಸಾಲಿನಲ್ಲಿ ಕಾಮಗಾರಿ ಸಂಖ್ಯೆ ನೀಡುವ ಪ್ರಕ್ರಿಯೆಯನ್ನು ವಿಕೇಂದ್ರೀಕರಣಗೊಳಿಸಿದ್ದು, ಅದರಂತೆ ಮಾರ್ಗಸೂಚಿಗಳನ್ನು ಅನುಸರಿಸಲು ಸೂಚಿಸಿದರು ಹಾಗೂ 2011–12ನೇ ಸಾಲಿನ ಆಯವ್ಯಯದಲ್ಲಿ ತೋಟಗಾರಿಕೆ ಮತ್ತು ಪರಿಸರ ನಿರ್ವಹಣೆಗೆ ಅನುದಾನ ಕಾಯ್ದಿರಿಸಿರುವ ವಿವರಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಜಿಂಕೆ ತೋಟದ ಅಭಿವೃದ್ಧಿ ಮತ್ತು ಲಕ್ಕಸಂದ್ರ ಕ್ವಾರಿಯಾ ಕಡತಗಳನ್ನು ಸಮಿತಿಯ ಪರಿಶೀಲನೆಗೆ ಒದಗಿಸಲು ಸೂಚಿಸಿದರು.

ಪಾಲಿಕೆಯ, ದಕ್ಷಿಣ–1 ಮತ್ತು 2ರ ವಲಯ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ಭೂವಿನ್ಯಾಸಗೊಳಿಸಿರುವ ಹಾಗೂ ಉದ್ಯಾನವನಗಳ ನಿರ್ವಹಣೆಯ ವಿವರಗಳಿಗೆ ಸಂಬಂಧಪಟ್ಟಂತಹ ಕಾಮಗಾರಿ ಕಡತಗಳನ್ನು ಸಮಿತಿಯು ಪರಿಶೀಲಿಸಿ, ತಪಾಸಣೆ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಗಿರುವ ಪ್ರಯುಕ್ತ ಸಮಿತಿಗೆ ಒದಗಿಸುವಂತೆ ಸೂಚಿಸಿದರು.

**ಶ್ರೀ.ಡಿ.ಎಂ.ಸುಬ್ಬಣ್ಣ, ತೋಟಗಾರಿಕೆ ಅಧೀಕ್ಷಕರು (ದಕ್ಷಿಣ–2)** ಕೆಲವು ಕಾಮಗಾರಿಗಳ ನಿರ್ವಹಣೆಯನ್ನು ತೋಟಗಾರಿಕೆ ಇಲಾಖೆರವರು ಎಷ್ಟು ಮಾಡಬೇಕು ಮತ್ತು ಯೋಜನಾ ವಿಭಾಗದವರು ಎಷ್ಟು ಮಾಡಬೇಕು ಎಂದು ಗೊಂದಲಗಳು ಬರುತ್ತಿರುವುದರಿಂದ, ಯಾವ ಕಾಮಗಾರಿಗಳನ್ನು ಯಾರು ನಿರ್ವಹಿಸಬೇಕು ಎಂಬುದರ ಬಗ್ಗೆ ಒಂದು ಸೂಕ್ತ ಮಾರ್ಗದರ್ಶನ ನೀಡುವಂತೆ ಅಧ್ಯಕ್ಷರನ್ನು ಕೋರಿದರು ಮತ್ತು ವಾರ್ಡ್‌ಗಳಲ್ಲಿ ಹಾಲಿ ಇರುವ ಬೋರ್‌ವೆಲ್‌ಗಳ ರಿಪೇರಿಗೆ ಹಣ ಸಾಕಾಗುವುದಿಲ್ಲವೆಂದು ಮನವಿ ಮಾಡಿದರು.

**ಅಧ್ಯಕ್ಷರು** ಮಾತನಾಡುತ್ತಾ, ವೃಕ್ಷವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಕಾರ್ಯವನ್ನು ತೋಟಗಾರಿಕೆ ಇಲಾಖೆರವರು ನಿರ್ವಹಿಸುವಂತೆ ಸೂಚಿಸಿದರು. ವಾರ್ಡ್‌ಗಳಲ್ಲಿ ಮಳೆನೀರು ಕೊಯ್ಲು ಕಾಮಗಾರಿಗೆ ಮೀಸಲಿಟ್ಟಿರುವ ಅನುದಾನದಲ್ಲಿ ಬೋರ್‌ವೆಲ್‌ಗಳ ದುರಸ್ಥಿ ಕಾರ್ಯಕ್ಕೆ ಬಳಸಿಕೊಳ್ಳಲು ಸಲಹೆ ನೀಡಿದರು.

ಉದ್ಯಾನವನಗಳ ಭೂವಿನ್ಯಾಸ ವೃತ್ತಗಳು, ಮೀಡಿಯನ್‌ಗಳು, ಸರ್ಕಲ್‌ಗಳು, ತೆರದ ಪ್ರದೇಶಗಳು ಮತ್ತು ಬುಲೇವಾರ್ಡ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಯಾರಾದರೂ ಪ್ರಾಯೋಜಕರು ಮುಂದೆ ಬಂದರೆ ಅವರಿಗೆ ನಿರ್ವಹಣೆಗೆ ಕೊಟ್ಟಲ್ಲಿ ಪಾಲಿಕೆಗ ಹಣ ಉಳಿತಾಯವಾಗುತ್ತದೆ ಮತ್ತು ನಿರ್ವಹಣೆ ಕಾರ್ಯವು ವ್ಯವಸ್ಥಿತವಾಗಿ ನಡೆಯುತ್ತದೆಂದು ಸೂಚಿಸಿದರು.

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

**1. ವಿಷಯ ಸಂಖ್ಯೆ:ತೋ/ಸ್ಥಾ/ಸ/40/ 11–12, ದಿನಾಂಕ: 10–01–2012**

*ಅತ್ತಿಗುಪ್ಪೆ ವಾರ್ಡ್ 132ರ ವ್ಯಾಪ್ತಿಯಲ್ಲಿ ಮಳೆನೀರು ಕೊಯ್ಲು ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ಅನುಮತಿ ನೀಡುವುದಕ್ಕೆ ಸಂಬಂಧಪಟ್ಟಂತೆ,* ವಿಜಯನಗರ ವಿಧಾನ ಸಭಾ ಕ್ಷೇತ್ರದ ಅತ್ತಿಗುಪ್ಪೆ ವಾರ್ಡ್ ಸಂಖ್ಯೆ.132ರ ವ್ಯಾಪ್ತಿಯಲ್ಲಿ 15 ಉದ್ಯಾನವನಗಳಿಗೆ, ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಪಾಲಿಕೆಯ ಸದಸ್ಯರ ಕೋರಿಕೆಯ ಮೇರೆಗೆ, ಈ ಕೆಳಕಂಡ ಉದ್ಯಾನವನಗಳಲ್ಲಿ ಮಳೆನೀರು ಕೊಯ್ಲು ಮಾಡಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ ಮಳೆ ನೀರು ಕೊಯ್ಲು ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

| ಕ್ರ. ಸಂ. | ಜಾಬ್ ಸಂಕೇತ | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1. | 132–12–000004 | ವಾರ್ಡ್ ನಂ.132ರ ಬಿ.ಸಿ.ಸಿ. ಬಡಾವಣೆಯಲ್ಲಿರುವ ಉದ್ಯಾನವನದಲ್ಲಿ ಮಳೆನೀರು ಕೊಯ್ಲುವಿನ ನಿರ್ಮಾಣ ಕಾಮಗಾರಿ | 0.55 |
| 2. | 132–12–000005 | ವಾರ್ಡ್ ನಂ.132ರ ಇನ್‌ಕಂ ಟ್ಯಾಕ್ಸ್ ಬಡಾವಣೆಯಲ್ಲಿರುವ ಉದ್ಯಾನವನದಲ್ಲಿ ಮಳೆನೀರು ಕೊಯ್ಲಿನ ನಿರ್ಮಾಣ ಕಾಮಗಾರಿ | 1.10 |
| 3. | 132–12–000006 | ವಾರ್ಡ್ ನಂ.132ರ ಚಂದ್ರ ಬಡಾವಣೆಯ ಗಣೇಶ ದೇವಸ್ಥಾನದ ಹಿಂಭಾಗದಲ್ಲಿರುವ ಉದ್ಯಾನವನದಲ್ಲಿ ಮಳೆನೀರು ಕೊಯ್ಲಿನ ನಿರ್ಮಾಣ ಕಾಮಗಾರಿ | 1.10 |
| 4. | 132–12–000007 | ವಾರ್ಡ್ ನಂ.132ರ ಬಿ.ಸಿ.ಸಿ. ಬಡಾವಣೆಯಲ್ಲಿರುವ ಉದ್ಯಾನವನ ಮತ್ತು ಖಾಲಿ ಜಾಗದಲ್ಲಿ ಮಳೆನೀರು ಕೊಯ್ಲಿನ ನಿರ್ಮಾಣ ಕಾಮಗಾರಿ | 1.10 |
| 5. | 132–12–000008 | ವಾರ್ಡ್ ನಂ.132ರ ಬಿನ್ನಿ ಲೇಔಟ್ ಉದ್ಯಾನವನದಲ್ಲಿ ಮಳೆನೀರು ಕೊಯ್ಲಿನ ನಿರ್ಮಾಣ ಕಾಮಗಾರಿ | 1.10 |
| 6. | 132–12–000009 | ವಾರ್ಡ್ ನಂ.132ರ ಗಂಗೊಂಡನಹಳ್ಳಿ ಮುಖ್ಯರಸ್ತೆಯಲ್ಲಿರುವ ಉದ್ಯಾನವನದಲ್ಲಿ ಮಳೆನೀರು ಕೊಯ್ಲಿನ ನಿರ್ಮಾಣ ಕಾಮಗಾರಿ | 1.10 |
| 7. | 132–12–000010 | ವಾರ್ಡ್ ನಂ.132ರ ಬಿ.ಸಿ.ಸಿ. ಬಡಾವಣೆಯಲ್ಲಿರುವ ಉದ್ಯಾನವನದಲ್ಲಿ ಮಳೆನೀರು ಕೊಯ್ಲಿನ ನಿರ್ಮಾಣ ಕಾಮಗಾರಿ | 1.10 |
| 8. | 132–12–000011 | ವಾರ್ಡ್ ನಂ.132ರ ಸ್ಕೈಲೈನ್ ಅಪಾರ್ಟ್‌ಮೆಂಟ್‌ನ (ಭಾಗ–2) ಉದ್ಯಾನವನದಲ್ಲಿ ಮಳೆನೀರು ಕೊಯ್ಲಿನ ನಿರ್ಮಾಣ ಕಾಮಗಾರಿ | 1.10 |

| | | | |
|---|---|---|---|
| 9. | **132–12–000012** | ವಾರ್ಡ್ ನಂ.132ರ ವಿಡಿಯಾ ಲೇಔಟ್‌ನ ಪಕ್ಕದಲ್ಲಿರುವ ಗ್ರಂಥಾಲಯ ಉದ್ಯಾನವನದಲ್ಲಿ ಮಳೆನೀರು ಕೊಯ್ಲಿನ ನಿರ್ಮಾಣ ಕಾಮಗಾರಿ | 1.10 |
| 10. | **132–12–000013** | ವಾರ್ಡ್ ನಂ.132ರ ಚಂದರ ಲೇಔಟ್ನ 80 ಅಡಿ ರಸ್ತೆಯಲ್ಲಿರುವ ಉದ್ಯಾನವನದಲ್ಲಿ ಮಳೆನೀರು ಕೊಯ್ಲಿನ ನಿರ್ಮಾಣ ಕಾಮಗಾರಿ | 1.10 |
| 11. | **132–12–000014** | ವಾರ್ಡ್ ನಂ.132ರ ಬಾಪೂಜಿ ಲೇಔಟ್ ಉದ್ಯಾನವನದಲ್ಲಿ ಮಳೆನೀರು ಕೊಯ್ಲಿನ ನಿರ್ಮಾಣ ಕಾಮಗಾರಿ | 1.65 |
| 12. | **132–12–000015** | ವಾರ್ಡ್ ನಂ.132ರ ಗುಡ್‌ವೆಲ್ ಅಪಾರ್ಟ್‌ಮೆಂಟ್ ಹಿಂಭಾಗದಲ್ಲಿರುವ ಉದ್ಯಾನವನದಲ್ಲಿ ಮಳೆನೀರು ಕೊಯ್ಲಿನ ನಿರ್ಮಾಣ ಕಾಮಗಾರಿ | 1.65 |
| 13. | **132–12–000016** | ವಾರ್ಡ್ ನಂ.132ರ ವೆಂಕಟೇಶ್ವರ ಲೇಔಟ್ ಉದ್ಯಾನವನದಲ್ಲಿ ಮಳೆನೀರು ಕೊಯ್ಲಿನ ನಿರ್ಮಾಣ ಕಾಮಗಾರಿ | 1.65 |
| 14. | **132–12–000017** | ವಾರ್ಡ್ ನಂ.132ರ ಶಕ್ತಿ ಗಣಪತಿ ಉದ್ಯಾನವನದಲ್ಲಿ ಮಳೆನೀರು ಕೊಯ್ಲಿನ ನಿರ್ಮಾಣ ಕಾಮಗಾರಿ | 1.65 |
| 15. | **132–12–000018** | ವಾರ್ಡ್ ನಂ.132ರ ಸ್ಕೈಲೈನ್ ಅಪಾರ್ಟ್‌ಮೆಂಟ್‌ನ (ಭಾಗ–1) ಉದ್ಯಾನವನದಲ್ಲಿ ಮಳೆನೀರು ಕೊಯ್ಲಿನ ನಿರ್ಮಾಣ ಕಾಮಗಾರಿ | 1.65 |
| | | **ಒಟ್ಟು** | **18.70** |

ಈ ಮೇಲ್ಕಂಡ ಒಟ್ಟು 15 ಕಾಮಗಾರಿಗಳಿಗೆ ಪಾಲಿಕೆಯ 2011–12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ–1868ರ ಅಡಿಯಲ್ಲಿ ಮೊತ್ತ ರೂ.400.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿದ್ದು, ಸದರಿ ಮೊತ್ತದಲ್ಲಿ ಲಭ್ಯವಿರುವ ಅನುದಾನ ರೂ.228.73 ಲಕ್ಷಗಳಲ್ಲಿ ಮಂಜೂರಾಗಿರುವ ಒಟ್ಟು 15 ಕಾಮಗಾರಿಗಳ ಮೊತ್ತ ರೂ.18.70 ಲಕ್ಷಗಳಿಗೆ ಜಾಬ್ ಸಂಕೇತ 132–12–000004 ರಿಂದ 132–12–000018 ರವರೆಗೆ ನೀಡಲಾಗಿರುತ್ತದೆ.

ಸದರಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರವುದರಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ಪ್ರಸ್ತಾಪಿಸಿರು ಕಾಮಗಾರಿಯನ್ನು ವಹಿಸಿಕೊಡಲು ಅನುಮೋದನೆ ಕೋರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರ ದಿನಾಂಕ:07–01–2012 ರ ಟಿಪ್ಪಣಿ.

<u>ನಿರ್ಣಯ</u> : **–ಮಾನ್ಯ ಆಯುಕ್ತರ ದಿನಾಂಕ:07–01–2012ರ ಟಿಪ್ಪಣಿಯನ್ನು ಒಪ್ಪಿದೆ.**

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆಗಳು ಮತ್ತು ನ್ಯೂನ್ಯತೆಗಳ ಬಗ್ಗೆ ಕ್ರಮವಹಿಸಿ ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಹಾಗೂ ಮಾನ್ಯ ಆಯುಕ್ತರು ಮುಖ್ಯ ಅಭಿಯಂತರರುಗಳು ಸಭೆಗೆ ಹಾಜರಾಗದೇ ಇರುವ ಬಗ್ಗೆ ಕ್ರಮವಹಿಸುವಂತೆ, ಕಾರ್ಯ ಪ್ರವೃತ್ತರಾಗಬೇಕೆಂದು ಕೋರುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–

ಅಧ್ಯಕ್ಷರು

ತೋಟಗಾರಿಕೆ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು :–

- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- *ವಿಶೇಷ ಆಯುಕ್ತರು(ಯೋಜನೆ)ರವರಿಗೆ* ಕಳುಹಿಸಿದೆ.
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ ಕಳುಹಿಸಿದೆ.
- ಪ್ರಧಾನ ಅಭಿಯಂತರವರಿಗೆ ಕಳುಹಿಸಿದೆ.
- ಮುಖ್ಯ ಅಭಿಯಂತರರು(ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಿದೆ.
- ಮುಖ್ಯ ಲೆಕ್ಕಾಧಿಕಾರಿಗಳಿಗೆ ಕಳುಹಿಸಿದೆ.
- ಕಾರ್ಯಪಾಲಕ ಅಭಿಯಂತರರು (ಯೋಜನೆ – (ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ/ಮಹದೇವಪುರ)ರವರಿಗೆ ಕಳುಹಿಸಿದೆ.
- *ತೋಟಗಾರಿಕೆ ಅಧೀಕ್ಷಕರು* (ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ಕಳುಹಿಸಿದೆ.
- ಕಛೇರಿ ಪ್ರತಿ.